<u>ಅಪರ ಸಿವಿಲ್ ಮತ್ತು ಜೆಎಂಎಫ್ಸಿ ನ್ಯಾಯಾಲಯ, ಚನ್ನಪಟ್ಟಣ</u>

<u>ಪ್ರಕರಣ ಸಂಖ್ಯೆಃ ಸಿ.ಸಿ.890/2016</u>

ದಿನಾಂಕಃ 18.08.2023
(ಸಾಕ್ಷಿಗೆ ಪ್ರಮಾಣ ಮಾಡಿಸಲಾಯಿತು.)

ಡಿಡಬ್ಲ್ಯೂಃ 1 (ಆರೋಪಿ)

| | | |
|---|---|---|
| ಹೆಸರು | ಃ | ಲಕ್ಷ್ಮಣಬಾಬು |
| ತಂದೆಯ ಹೆಸರು | ಃ | ಚಂದ್ರೇಗೌಡ ಎಂ.ವಿ |
| ವಯಸ್ಸು | ಃ | 53 ವರ್ಷ |
| ಉದ್ಯೋಗ | ಃ | ವ್ಯವಸಾಯ |
| ವಾಸ ಸ್ಥಳ | ಃ | ಚನ್ನಪಟ್ಟಣ |

<u>ಮುಖ್ಯ ವಿಚಾರಣೆಃ ಆರೋಪಿ ಪರ ಶ್ರೀ.ಹೆಚ್ಎಸ್ಹೆಚ್., ವಕೀಲರಿಂದಃ</u>

ಪಿರ್ಯಾದಿಯನ್ನು ನಾನು ನ್ಯಾಯಾಲಯದಲ್ಲಿ 2 ನೇ ಬಾರಿಗೆ ನೋಡಿರುತ್ತೇನೆ. ಅವರ ಪರಿಚಯ ಇಲ್ಲ.

2. ನನ್ನ ಸ್ನೇಹಿತರೊಬ್ಬರಿಗೆ ಚೀಟಿ ಸಮಯದಲ್ಲಿ ಭದ್ರತೆಗಾಗಿ ನನ್ನ ಖಾತೆಯ ಚೆಕ್ ನೀಡಿದ್ದೆನು. ನನಗೆ ನ್ಯಾಯಾಲಯದಿಂದ ನೋಟೀಸ್ ಬಂದ ನಂತರ ನಾನು ನನ್ನ ಸ್ನೇಹಿತರನ್ನು ಹೋಗಿ ಭೇಟಿ ಮಾಡಿ, ಸದರಿ ವಿಚಾರದ ಬಗ್ಗೆ ಕೇಳಿದಾಗ ವಿಚಾರಿಸಿ ಹೇಳುತ್ತೇನೆಂದು ತಿಳಿಸಿದರು. ನಂತರ ನನ್ನ ಸ್ನೇಹಿತ ನಾನು ಚೀಟಿ ಮೊತ್ತವನ್ನು ಸಂಪೂರ್ಣವಾಗಿ ಪಾವತಿ ಮಾಡಿದ್ದೇನೆ, ನಿಮ್ಮ ಚೆಕ್ನ್ನು ವಾಪಸ್ಸು ಕೊಡಿಸುತ್ತೇನೆಂದು ಹೇಳಿದರು. ಆದರೂ ಪ್ರಸ್ತುತ ಪ್ರಕರಣದ ನನ್ನ ವಿರುದ್ಧ ದಾಖಲು ಮಾಡಿದ್ದಾರೆ.

3. ನನ್ನ ಬಳಿ ದಾಖಲಾತಿಗಳಿದ್ದು, ಮುಂದಿನ ದಿನಾಂಕದಂದು ಹಾಜರುಪಡಿಸುತ್ತೇನೆ. ಪ್ರಸ್ತುತ ಪ್ರಕರಣಕ್ಕೂ ನನಗೂ ಯಾವುದೇ ಸಂಬಂಧವಿಲ್ಲ. ಸದರಿ ಪ್ರಕರಣದಿಂದ ನನ್ನನ್ನು ಬಿಡುಗಡೆ ಮಾಡಬೇಕಾಗಿ ವಿನಂತಿಸಿಕೊಳ್ಳುತ್ತೇನೆ.

(ಆರೋಪಿ ಪರ ವಕೀಲರ ಕೋರಿಕೆಯ ಮೇರೆಗೆ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)
(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು).

ಓ.ಹೇ.ಕೇ.ಸರಿ ಇದೆ ಎಂದು ಸಾಕ್ಷಿ ಒಪ್ಪಿದ್ದಾರೆ.

(ಬಿ.ಎನ್.ಉಷಾರಾಣಿ )
ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಜೆಎಂಎಫ್ಸಿ
ಚನ್ನಪಟ್ಟಣ.